ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192 – 263462 | ತ್ರೈಮಾಸಿಕ ಪತ್ರಿಕೆ | ಮಿಂಚಂಚೆ: dvgtkvk@yahoo.com

ಫ್ಯಾಕ್ಸ್: 08192 – 260969 | Quarterly News Letter | ಸಂಪುಟ-6 ಸಂಚಿಕೆ-1

Website:www.taralabalukvk.com | ಅಕ್ಟೋಬರ್– ಡಿಸೆಂಬರ್ 2012

## ಸಿಂಚನಕ್ಕೆ ಮುನ್ನ......

ಸಹೃದಯ ಬಂಧುಗಳೇ,

ನವ ವರುಷದ ಶುಭೋದಯವಾಗಿದೆ. ನಿಮಗೆಲ್ಲರಿಗೂ ಹೃತ್ಪೂರ್ವಕ ಶುಭಾಷಯಗಳನ್ನು 'ಸಂಕ್ರಾಂತಿ' ಯ ಎಳ್ಳು-ಬೆಲ್ಲದ ಸವಿಯೊಂದಿಗೆ ಈ ಮೂಲಕ ತಿಳಿಸುತ್ತಿದ್ದೇನೆ.

2012 ರ ಆರಂಭದ ತಿಂಗಳುಗಳಲ್ಲಿ ನಮ್ಮ ಕೃಷಿ ವಿಜ್ಞಾನ ಕೇಂದ್ರದ ಕಟ್ಟಡ ಸಮುಚ್ಚಯದ ಉದ್ಘಾಟನೆಯ ಸಂಭ್ರಮವಿತ್ತು. ವರ್ಷಾಂತ್ಯದ ವೇಳೆಗೆ ಪಂಜಾಬಿನ ಲೂಧಿಯಾನದಲ್ಲಿ ನಡೆದ ಕೃಷಿ ವಿಜ್ಞಾನ ಕೇಂದ್ರಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಕೃಷಿ ವಿಜ್ಞಾನ ಕೇಂದ್ರದ ಮಳಿಗೆಯನ್ನು ನಿಭಾಯಿಸುವ ಜವಾಬ್ದಾರಿಯಿತ್ತು. ಕಳೆದ ವರುಷದ ಚಟುವಟಿಕೆಗಳ ಸವಿನೆನಪಿನ ಮೆಲುಕಿನಲ್ಲಿ ಹೊಸ ವರುಷವ ಉತ್ಸಾಹದಿ ಸ್ವಾಗತಿಸುವ ಹುಮ್ಮಸ್ಸು, ತುಸು ತೃಪ್ತಿ ನಮ್ಮಲ್ಲಿದೆ. ಪರಮ ಪೂಜ್ಯ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಕೃಪಾಶೀರ್ವಾದ, ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಸಂಪೂರ್ಣ ಬೆಂಬಲ ಮತ್ತು ಮಾರ್ಗದರ್ಶನ, ಒಟ್ಟು ದಾವಣಗೆರೆ ಜಿಲ್ಲೆ ಜನತೆಯ ಸಹಕಾರ ಇವೆಲ್ಲವೂ ನಮ್ಮನ್ನು ಮತ್ತಷ್ಟು ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಅಣಿಗೊಳಿಸಿವೆ.

2012ರ ವರ್ಷಾಂತ್ಯದ ಮೂರು ಮಾಸಗಳು ಬಹಳವೇ ವಿಶೇಷವಾಗಿದ್ದವು. ಕರ್ನಾಟಕ ಕೃಷಿ ಮಾರುಕಟ್ಟೆ ಮಂಡಳಿ, ಬೆಂಗಳೂರು ಇವರ ಸಹಯೋಗದಲ್ಲಿ ಹತ್ತಿ ಮತ್ತು ಭತ್ತಗಳ ಮಾರುಕಟ್ಟೆ ವಿಷಯದಲ್ಲಿ ಕಾರ್ಯಾಗಾರಗಳನ್ನು ರೈತರಿಗಾಗಿ ನಡೆಸಿದೆವು. ನಂತರ, ತೋಟಗಾರಿಕೆ ಇಲಾಖೆ, ದಾವಣಗೆರೆ ಇವರ ಪ್ರಾಯೋಜಕತ್ವದಲ್ಲಿ 'ಪುಷ್ಪ ಬೆಳೆಗಳಲ್ಲಿ ಆಧುನಿಕ ತಂತ್ರಜ್ಞಾನಗಳು' ಮತ್ತು 'ಬಾಳೆಯ ಸುಧಾರಿತ ಉತ್ಪಾದನಾ ಮತ್ತುಕೊಯ್ಲೋತ್ತರ ತಂತ್ರಜ್ಞಾನಗಳು' ಇವುಗಳ ಬಗ್ಗೆ ರೈತರಿಗಾಗಿ ಕಾರ್ಯಾಗಾರಗಳನ್ನು ನಡೆಸಿದೆವು. ಏತನ್ಮಧ್ಯೆ, ಕಬ್ಬು ಬೆಳೆ ಬಗ್ಗೆ ಗಣಕಯಂತ್ರಾಧಾರಿತ ಪರಿಣಿತ ವ್ಯವಸ್ಥೆಯ ಅಭಿವೃದ್ಧಿ ಪಡಿಸುವ ಕಾರ್ಯದಲ್ಲಿ ಬೀದರ್ ಮತ್ತು ಬೆಳಗಾಂ ಕೃಷಿ ವಿಜ್ಞಾನ ಕೇಂದ್ರಗಳೊಂದಿಗೆ ಗುರುತರವಾಗಿ ಕೆಲಸ ನಿರ್ವಹಿಸಿದ್ದು ಗಟ್ಟಿ ಅನುಭವ. ನಮಗೆಲ್ಲರಿಗೂ ಸಂಭ್ರಮ ತಂದಿದ್ದು, ಕೃಷಿ ವಿಜ್ಞಾನ ಕೇಂದ್ರಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ನಮ್ಮ ಕೃಷಿ ವಿಜ್ಞಾನ ಕೇಂದ್ರಕ್ಕೆ ಪ್ರದರ್ಶನ ಮಳಿಗೆ ಹಾಕಲು ಸಿಕ್ಕ ಅವಕಾಶ. ಇದರ ಸಂಪೂರ್ಣ ಉಪಯೋಗ ಪಡೆಯಲು ನಮ್ಮ ಇಡೀ ತಂಡ ಅತ್ಯಂತ ಕ್ರಿಯಾಶೀಲವಾಗಿ ಜವಾಬ್ದಾರಿ ಮೆರೆಯಿತು. ಮಳಿಗೆಗೆ ಬೇಕಾದ ಸಾಮಾಗ್ರಿಗಳ ತಯಾರಿ ಒಂದು ಹಂತವಾದರೆ, ಅವನ್ನೆಲ್ಲಾ ಸಮರ್ಪಕವಾಗಿ ಪ್ರದರ್ಶಿಸಿ ಸೈ ಎನಿಸಿಕೊಂಡಿದ್ದು ಮತ್ತೊಂದು ಪ್ರಮುಖ ಅಂಶ. ಕಲಿಸುತ್ತಾ, ಕಲಿಯುತ್ತಾ, ಸಮ್ಮೇಳನದ ಅನುಭವವನ್ನು ಬಹಳ ಉಪಯುಕ್ತಗೊಳಿಸುವುದು ಎಲ್ಲರ ಮನಸ್ಸಲ್ಲಿ ಒತ್ತಿ ನಿಂತಿತ್ತು. ಇಡೀ ರಾಜ್ಯದ ಕೃಷಿ ವಿಜ್ಞಾನ ಕೇಂದ್ರಗಳ ಪ್ರತಿನಿಧಿಯೆಂಬಂತೆ ನಮ್ಮ ಮಳಿಗೆ ಸಮ್ಮೇಳನದಲ್ಲಿ ರಾರಾಜಿಸಿ, ಎಲ್ಲರ ಮನ ಸೂರೆಗೊಂಡಿತ್ತು. ರಾಷ್ಟ್ರ ಮಟ್ಟದಲ್ಲಿ ಸಿಕ್ಕ ಈ ಗೌರವವು ನಮ್ಮ ಜವಾಬ್ದಾರಿಗಳನ್ನು ಹೆಚ್ಚಾಗಿಸಿತ್ತು. ಈ ಭಾಗವಹಿಸುವಿಕೆಗೆ ಅವಕಾಶವಿತ್ತ ಎಲ್ಲರಿಗೂ ಹೃತ್ಪೂರ್ವಕ ವಂದನೆಗಳು.

ನಿಜ, ಕಠೋರವಾಗಿತ್ತು ಈ ಬಾರಿಯ ಮುಂಗಾರು. ಕೈಗೆ ಬಂದಿದ್ದು, ಬಾಯಿಗೆ ಬರಲಿಲ್ಲ ಎಂಬಂತಾಗಿತ್ತು. ಪ್ರಮುಖವಾಗಿ ಮೆಕ್ಕೆಜೋಳ ಬೆಳೆ ನಮ್ಮೆಲ್ಲಾ ರೈತರ ಕೈ ತಪ್ಪಿಹೋಗಿತ್ತು. 'ನಿಕ್ರಾ' ಯೋಜನೆಯಡಿಯಲ್ಲಿ ಬೆಳೆದ ಅಕ್ಕಡಿ ತೊಗರಿ, ರಾಗಿ ಬೆಳೆಗಳು ಅಲ್ಪ ಸ್ವಲ್ಪ ಕೈ ಹಿಡಿದವು. ಅಡಿಕೆ, ತೆಂಗು, ಬಾಳೆ ತೋಟಗಳ ರೋಗ-ಕೀಟ ಬಾಧೆಗಳ ನಿರ್ವಹಣಾ ಕ್ರಮಗಳನ್ನು ಕ್ಷೇತ್ರ ಭೇಟಿಗಳ ಮುಖಾಂತರ ರೈತರಿಗೆ ತಿಳಿಸುವುದು ನಿತ್ಯದ ಕೆಲಸವಾಗಿತ್ತು. ಇದ್ದಕ್ಕಿದ್ದಂತೆ ನವೆಂಬರ್‌ನಲ್ಲಿ ಬಿದ್ದ ಮೂರು ದಿನಗಳ ನಿರಂತರ ಮಳೆ ಭೂಮಿಯನ್ನು ಕೆಲ ಮಟ್ಟಿಗೆ ತಂಪಾಗಿಸಿತು. ಈ ಸಂದರ್ಭದಲ್ಲಿ, ಮೊದಲಬಾರಿಗೆ, ನಮ್ಮ ಕದಳೀವನದಲ್ಲಿ ಕೊಳವೆಬಾವಿ ಅಂತರ್ಜಲ ಮರುಪೂರಣದ ಘಟಕದಲ್ಲಿ ನೀರು ಇಂಗುವುದನ್ನು ನೋಡುವ ಅವಕಾಶ ಸಿಕ್ಕಿತು.

'ಅನ್ವೇಷಣೆ' ಸಂಸ್ಥೆಯ ಸಹಯೋಗದಲ್ಲಿ ನಡೆದ ಜಾನಪದ ಸೊಗಡಿನ 'ಸಾಂಝಿ' ಕಲೆಯ ಕಾರ್ಯಾಗಾರ (ಕಲಾವಿದ ಮೈಸೂರು ಹುಸೇನಿ) ಅನೇಕ ವಿದ್ಯಾರ್ಥಿ, ನಾಗರೀಕರನ್ನು ಆಕರ್ಷಿಸಿತ್ತು. ಈ ಸಾಂಝಿ ಕಲೆಯಲ್ಲಿ ಆಧುನಿಕ ಸಮಾಜದ ಒತ್ತಡಗಳ ನಿರ್ವಾಣೆ, ನಿರ್ವಹಣೆ ಉಪಾಯಗಳು ಸೂಕ್ಷ್ಮವಾಗಿ ಅಡಗಿದ್ದವು. ದಣಿದ ರೈತ ಸಂಕುಲಕ್ಕೂ ಇದು ಬೇಕೆನಿಸಿತ್ತು ನನಗೆ.

ನಾನು ತುಂಬಾ ಇಷ್ಟಪಡುವ ತೆಂಗಿನ ಮರದ ಕುರಿತು ಒಂದು ವಾರದ ವಿಶೇಷ ತರಬೇತಿ ' Friends of Coconut Tree (FOCT) ಇದನ್ನು ತೆಂಗು ಅಭಿವೃದ್ಧಿ ಮಂಡಳಿ, ಪ್ರಾದೇಶಿಕ ಕಛೇರಿ, ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ 20 ಜನ ನಿರುದ್ಯೋಗಿ ಯುವ ಮಿತ್ರರಿಗೆ ನೀಡಿ, ಒಂದು ಪುಟ್ಟ 'ತೆಂಗು ಸೈನ್ಯ' ವನ್ನು ತಯಾರು ಮಾಡಿದಂಥ ಅನುಭವ ನಮಗಾಯ್ತು. ಜೊತೆಗೆ 800 ಕ್ಕೂ ಹೆಚ್ಚಿನ ಮಹಿಳೆಯರಿಗೆ, (50 ಕ್ಕೂ ಹೆಚ್ಚು ಹಳ್ಳಿಗಳು) ಎಸ್.ಜಿ.ಎಸ್.ವೈ ಯಡಿಯಲ್ಲಿ (ಜಿಲ್ಲಾ ಪಂಚಾಯತ್ ಪ್ರಾಯೋಜಕತ್ವದ) ಜೇನುಗಾರಿಕೆ ತರಬೇತಿಗಳನ್ನು ನೀಡುತ್ತಿರುವುದು ನಮ್ಮನ್ನು ಗ್ರಾಮೀಣ ಮಟ್ಟದಲ್ಲಿ ಮತ್ತಷ್ಟು ಪರಿಚಿತರನ್ನಾಗಿಸುತ್ತಿದೆ.

ಮರೆಯದೇ ಖುಷಿಯಿಂದ ಆಚರಿಸಿದ 'ವಿಶ್ವ ಆಹಾರ ದಿನ' 'ಕೃಷಿಯಲ್ಲಿ ಮಹಿಳೆ ದಿನ' ಮತ್ತು ರೈತ ಸನ್ಮಾನ ದಿನ' ಇವುಗಳು ಅನೇಕ ಹೊಸ ರೈತರನ್ನು ನಮ್ಮ ಕೇಂದ್ರಕ್ಕೆ ಹತ್ತಿರವಾಗಿಸಿದವು.

ನೀರಾವರಿಗೆ ಬೇಕಾದ ನೀರಿನ ಸಂಪನ್ಮೂಲದ ಮೇಲೆ ನಮ್ಮ ಎರಡು ಕ್ಯಾಂಪಸ್‌ಗಳ ಚಟುವಟಿಕೆಗಳು, ಹೆಚ್ಚಿಸಿದ ಒತ್ತಡ ಮತ್ತು ಹೆಚ್ಚಿನ ಜಾಗರೂಕತೆಯನ್ನು ನಮ್ಮಿಂದ ಬಯಸುತ್ತಿವೆ ಎಂಬ ಸಂದೇಶವನ್ನು ಸ್ವೀಕರಿಸುತ್ತ ಹೊಸವರ್ಷವನ್ನು ತೆರೆದ ಮನಸ್ಸಿನಿಂದ ಸ್ವಾಗತಿಸಿದ್ದೇವೆ. ಸಹೃದಯರೊಬ್ಬರು ಬುದ್ಧನ ನುಡಿ ಜ್ಞಾಪಿಸಿದರು- Be compassionate, Be Liberated. ಒಳ್ಳೆಯ ಕೃಷಿ ಬದುಕು ಕಟ್ಟುವ ಕಾರ್ಯಕ್ಕೆ ಸೃಜನಶೀಲ ಶಕ್ತಿ ನೀಡು ಪ್ರಕೃತಿ ದೇವರೆ ಎಂದು ಪ್ರಾರ್ಥಿಸುತ್ತಾ, ನಿಮಗೆಲ್ಲರಿಗೆ ಮತ್ತೊಮ್ಮೆ ಶುಭಕೋರಿ ಕೃಷಿ ಸಿಂಚನವನ್ನು ನಿಮ್ಮ ಕೈಗಿಡುತ್ತಿದ್ದೇನೆ.

ವಂದನೆಗಳು,

–ಪ್ರೀತಿಯಿಂದ

**ಡಾ. ದೇವರಾಜ ಟಿ.ಎನ್.**

ಕಾರ್ಯಕ್ರಮ ಸಂಯೋಜಕರು

# ಕೃಷಿ ವಸ್ತು ಪ್ರದರ್ಶನ

ದಿನಾಂಕ 20–22, ನವೆಂಬರ್ 2012 ರಲ್ಲಿ ಪಂಜಾಬ್‌ನ ಲೂದಿಯಾನ (ಪಂಜಾಬ್ ಕೃಷಿ ವಿಶ್ವ ವಿದ್ಯಾನಿಲಯ) ದಲ್ಲಿ ನಡೆದ ಕೃಷಿ ವಿಜ್ಞಾನ ಕೇಂದ್ರಗಳ 7ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ನಮ್ಮ ಕೇಂದ್ರ ಕೃಷಿ ವಸ್ತು ಪ್ರದರ್ಶನ ಮಳಿಗೆಯನ್ನು ಏರ್ಪಡಿಸಲಾಗಿತ್ತು.




## ಹಮ್ಮಿಕೊಂಡ ಪ್ರಾಯೋಜಿತ ತರಬೇತಿಗಳು/ಕಾರ್ಯಾಗಾರಗಳು:



ದಿನಾಂಕ 10–10–2012 ರಂದು ತೋಟಗಾರಿಕೆ ಇಲಾಖೆ, ದಾವಣಗೆರೆ ಇವರು ಪ್ರಾಯೋಜಿತ 'ವಾಣಿಜ್ಯ ಪುಷ್ಪ ಬೆಳೆಗಳ ಆಧುನಿಕ ಬೇಸಾಯ ಕ್ರಮಗಳು ಮತ್ತು ಡ್ರೈ ಫ್ಲವರ್ ತಂತ್ರಜ್ಞಾನ' ವಿಷಯದಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 17–10–2012 ರಂದು ತೋಟಗಾರಿಕೆ ಇಲಾಖೆ, ದಾವಣಗೆರೆ ಇವರು ಪ್ರಾಯೋಜಿತ 'ಬಾಳೆಯಲ್ಲಿ ಆಧುನಿಕ ಉತ್ಪಾದನಾ ತಾಂತ್ರಿಕತೆಗಳು ಮತ್ತು ಕೊಯ್ಲೋತ್ತರ ತಂತ್ರಜ್ಞಾನ' ಬಗ್ಗೆ ಕಾರ್ಯಾಗಾರವನ್ನು ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 08–11–2012 ರಿಂದ 10–11–2012 ರವರೆಗೆ ಕೇಂದ್ರದಲ್ಲಿ ಅನ್ವೇಷಣೆ ಸಂಸ್ಥೆಯ ಸಹಯೋಗದಲ್ಲಿ 'ಸಾಂಝಿ ಚಿತ್ರ ಕಲೆ' ಬಗ್ಗೆ ಶಾಲಾ ಮಕ್ಕಳಿಗೆ ಮತ್ತು ನಾಗರೀಕರಿಗೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.



ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ ದಿನಾಂಕ 10–12–2012 ರಿಂದ 15–12–2012 ರವರೆಗೆ 'ತೆಂಗಿನ ಮರ ಹತ್ತುವುದು ಮತ್ತು ಸಸ್ಯ ಸಂರಕ್ಷಣೆ' ಬಗ್ಗೆ 20 ನಿರುದ್ಯೋಗಿ ಯುವಕರಿಗೆ ತರಬೇತಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮಂಡಳಿಯವತಿಯಿಂದ ಯುವಕರಿಗೆ ತೆಂಗಿನ ಮರ ಹತ್ತುವ ಸಾಧನವನ್ನು ವಿತರಿಸಲಾಯಿತು.



ದಿನಾಂಕ 29–12–2012 ರಂದು ಆತ್ಮಾ ಯೋಜನೆ, ಕೃಷಿ ಇಲಾಖೆ ಪ್ರಾಯೋಜಿತ 'ಮಾವಿನಲ್ಲಿ ಆಧುನಿಕ ಬೇಸಾಯ ಕ್ರಮಗಳು ಬಗ್ಗೆ ಕಾರ್ಯಾಗಾರವನ್ನು ಚನ್ನಗಿರಿ ತಾಲ್ಲೂಕು, ದೊಡ್ಡಬ್ಬಿಗೆರೆ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು.



ಜಿಲ್ಲಾ ಪಂಚಾಯತ್, ದಾವಣಗೆರೆ ಇವರು ಪ್ರಾಯೋಜಿತ ಎಸ್. ಜಿ. ಎಸ್. ವೈ. ಯೋಜನೆಯಡಿ 6 ದಿನದ 'ಸಮಗ್ರ ಹೈನುಗಾರಿಕೆ ಮತ್ತು ಎರೆಗೊಬ್ಬರ ತಯಾರಿಕೆ ಪರಿಣಿತ ತರಬೇತಿ'ಯ 8 ಕಾರ್ಯಕ್ರಮಗಳನ್ನು 377 ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರುಗಳಿಗೆ ಹಮ್ಮಿಕೊಳ್ಳಲಾಗಿತ್ತು.



ಬೆಳವನೂರು, ದಾವಣಗೆರೆ ತಾ॥

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು ಇವರ ಸಂಯೋಗದಲ್ಲಿ 'ರೈತರಿಗೆ ಮಾರುಕಟ್ಟೆ ವ್ಯವಸ್ಥೆ ಹಾಗೂ ಎ.ಪಿ.ಎಂ.ಸಿ. ಯಲ್ಲಿ ಸಿಗುವ ಸೌಲಭ್ಯಗಳು' ಬಗ್ಗೆ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿತ್ತು.



ಬೆಣ್ಣೇಹಳ್ಳಿ, ಹರಪನಹಳ್ಳಿ ತಾ॥

## ಆಚರಿಸಿದ ವಿಶೇಷ ದಿನಾಚರಣೆಗಳು



ದಿನಾಂಕ 16-10-2012 ರಂದು ಕೃಷಿ ಇಲಾಖೆ, ದಾವಣಗೆರೆ ಇವರ ಸಹಯೋಗದಲ್ಲಿ 'ವಿಶ್ವ ಆಹಾರ ದಿನಾಚರಣೆ' ಯನ್ನು ಆಚರಿಸಲಾಯಿತು.



ದಿನಾಂಕ 4-12-2012 ರಂದು ಕೇಂದ್ರದಲ್ಲಿ 'ಕೃಷಿಯಲ್ಲಿ ಮಹಿಳೆ ದಿನಾಚರಣೆ' ಯನ್ನು ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 23-12-2012 ರಂದು ಕೇಂದ್ರದಲ್ಲಿ 'ರೈತರ ದಿನಾಚರಣೆ' ಯನ್ನು ಆಚರಿಸಲಾಯಿತು.

## ಕೃಷಿ ಮುನ್ಸೂಚನೆಗಳು

**ಭತ್ತ:**



- ಭತ್ತವನ್ನು ಯಾಂತ್ರೀಕೃತ ನಾಟಿ ಪದ್ಧತಿಯಲ್ಲಿ ಬೆಳೆಯುವುದರಿಂದ ಪ್ರತಿ ಎಕರೆಗೆ 10 ಕೆಜಿ ಬೀಜ ಬೇಕಾಗುತ್ತದೆ.
- ಟ್ರೇ ಪದ್ಧತಿಯಲ್ಲಿ ಸಸಿಗಳನ್ನು ಬೆಳೆಸುವುದರಿಂದ ಬೇಸಿಗೆಯಲ್ಲಿ 25 ದಿವಸಕ್ಕೆ ನಾಟಿ ಮಾಡಬಹುದು.
- ಶಿಫಾರಸ್ಸು ಮಾಡಿದ ರಸಾಯನಿಕ ಗೊಬ್ಬರವನ್ನು ಬಳಸಬೇಕು 40:20:20: ಎನ್.ಪಿ.ಕೆ. ಬಳಸಿ.
- 50 % ರಷ್ಟು ಸಾರಜನಕ, ಪೂರ್ತಿ ರಂಜಕ ಮತ್ತು ಪೊಟ್ಯಾಷ್ ನಾಟಿಯಾದ 2 ದಿನಗಳಲ್ಲಿ ಹಾಕಬೇಕು.

**ಶೇಂಗಾ:**

- ನೀರಿನ ನಿರ್ವಹಣೆಯನ್ನು ಮಣ್ಣಿನ ಗುಣಧರ್ಮದ ಆಧಾರದ ಮೇಲೆ ನಿರ್ವಹಿಸಬೇಕು. ಕೆಂಪು ಮಣ್ಣಿನಲ್ಲಿ 8-10 ದಿವಸಕ್ಕೊಮ್ಮೆ ಮತ್ತು ಕಪ್ಪು ಮಣ್ಣಿನಲ್ಲಿ 10-15 ದಿವಸಕ್ಕೊಮ್ಮೆ ನೀರು ಕೊಡಬೇಕು.
- ಪ್ರತಿ ಎಕರೆಗೆ 200 ಕೆಜಿ ಜಿಪ್ಸಂ ಬಳಸುವುದರಿಂದ ಕಾಯಿ ಗಾತ್ರ ಹಾಗೂ ಎಣ್ಣೆ ಅಂಶ ಹೆಚ್ಚುತ್ತದೆ.
- ಬಿತ್ತನೆಯಾದ 40 ದಿನದ ನಂತರ - ಪೊಟ್ಯಾಷಿಯಂ ನೈಟ್ರೇಟ್ ($KNO_3$)- 5 ಗ್ರಾಂ./1 ಲೀ. ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು.



**ಸುರುಳಿ ಪೂಚಿ:** ಈ ಕೀಟ ಬೇಸಿಗೆ ಬೆಳೆಯಲ್ಲಿ ಫೆಬ್ರವರಿ-ಮಾರ್ಚ್ ತಿಂಗಳುಗಳಲ್ಲಿ ಕಂಡು ಬರುತ್ತದೆ. ಮರಿಹುಳುಗಳು ಪ್ರಾರಂಭದಲ್ಲಿ ಚಿಗುರು ಎಲೆಗಳನ್ನು ಕೆರೆದು ಒಳಗಿನ ಹಸಿರನ್ನು ತಿನ್ನುತ್ತವೆ. ಬೆಳೆದ ಹುಳುಗಳು 2-3 ಎಲೆಗಳನ್ನು ಮಡಚಿ ಹಸಿರನ್ನು ಕೆರೆದು ತಿನ್ನುತ್ತವೆ. ಬಾಧೆ ಹೆಚ್ಚಾದಾಗ ಗಿಡಗಳು ಸುಟ್ಟಂತೆ ಕಂಡು ಬೆಳವಣಿಗೆ ಕುಂಠಿತವಾಗುತ್ತದೆ.

**ಹತೋಟಿ:** ಶೇಂಗಾ ಮತ್ತು ಅಲಸಂದೆ (4:1) ಮಿಶ್ರ ಬೆಳೆಯಾಗಿ ಬೆಳೆಯಬೇಕು. ಒಂದು ಗಿಡದಲ್ಲಿ 2 ಕ್ಕಿಂತ ಹೆಚ್ಚು ಹುಳುಗಳು ಕಂಡಾಗ ಡೈಮಿಥೋಯೆಟ್ 1.7 ಮಿಲೀ./ಲೀ. ಅಥವಾ ಪ್ರೋಫೆನೊಫಾಸ್ 2 ಮಿಲೀ./ಲೀ. ಬೆರೆಸಿ ಸಿಂಪಡಿಸಬೇಕು.

**ಕಬ್ಬಿನಲ್ಲಿ ಜೋಡು ಸಾಲು ಪದ್ಧತಿ:**



ಮಧ್ಯಮ ಆಳದ ಕಪ್ಪು ಭೂಮಿಯಲ್ಲಿ 60 ಸೆಂ. ಮೀ. ಅಥವಾ 90 ಸೆಂ. ಮೀ. ಸಾಲುಗಳು ಮಾಡಿ ಎರಡು ಸಾಲುಗಳನ್ನು ನಾಟಿ ಮಾಡುವುದರಿಂದ ರೈತರಿಗೆ ಅನೇಕ ಲಾಭಗಳು:

- ಕಬ್ಬಿನ ಬೆಳೆಗೆ ಸೂರ್ಯನ ಬೆಳಕು ಸರಿಯಾಗಿ ದೊರೆತು ಕಬ್ಬು ಸಮೃದ್ಧವಾಗಿ ಬೆಳೆದು ಇಳುವರಿ ಹೆಚ್ಚುವುದು.
- ಕಬ್ಬಿಗೆ ಮಣ್ಣು ಹೇರಿಸಲು ಅನುಕೂಲವಾಗುವುದು ಇದರಿಂದ ಕಬ್ಬು ಬೀಳುವುದನ್ನು ತಡೆಯುವುದು.
- ಸರಿಯಾಗಿ ಗಾಳಿಯಾಡುವುದು. • ಖಾಲಿ ಬಿಟ್ಟ ಸ್ಥಳದಲ್ಲಿ ಅಂತರ ಬೆಳೆಗಳನ್ನು ಬೆಳೆಯುವುದು (ಬೀನ್ಸ್, ಅಲಸಂದೆ, ಸೆಣಬು).
- ಶೇ. 40 ರಷ್ಟು ನೀರಿನ ಉಳಿತಾಯವಾಗುವುದು.

## ಮಾವು

ಜಿಗಿಹುಳು: ಹೂ ಬಿಡುವ ಸಮಯದಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಅಪ್ಸರೆ ಮತ್ತು ಬೆಳೆದ ಕೀಟಗಳು ಚಿಗುರು ಮತ್ತು ಹೂ ಗೊಂಚಲುಗಳಿಂದ ರಸ ಹೀರುತ್ತವೆ. ರೆಂಬೆಯ ಮೇಲೆ ಕಪ್ಪಾಗಿ ಹೂಗಳು ಸುಟ್ಟಂತಾಗುತ್ತದೆ. ಸಿಹಿ ಅಂಟು ಪದಾರ್ಥವನ್ನು ವಿಸರ್ಜಿಸಿ ಅದರ ಮೇಲೆ ಕಪ್ಪು ಬೂಸ್ಟ್ ಬೆಳೆಯುತ್ತದೆ. ಪ್ರತಿವರ್ಷದ ಬಾಧೆಯಿಂದ ಮರಗಳು ಫಲ ಬಿಡುವ ಸಾಮರ್ಥ್ಯ ಕಡಿಮೆಯಾಗುತ್ತದೆ.

**ಹತೋಟಿ**: ಹೂ ಬಿಡುವುದಕ್ಕೆ ಮುಂಚೆ ಎಕರೆಗೆ 10 ಹಳದಿ ಅಂಟಿನ ಬಲೆಯನ್ನು ಇಡಬೇಕು. ಹೂ ಬಿಡುವುದಕ್ಕೆ ಮುಂಚೆ ಮತ್ತು ಕಾಯಿ ಕಟ್ಟಿದ ಕೂಡಲೇ ಕಾರ್ಬರಿಲ್ 4 ಗ್ರಾಂ. ಅಥವಾ ಇಮಿಡಾಕ್ಲೊಪ್ರಿಡ್ 0.3 ಮಿ.ಲೀ. ಅಥವಾ ಅಸಿಟಾಮಿಪ್ರಿಡ್ 0.2 ಗ್ರಾಂ. ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಸಿಂಪಡಿಸಬೇಕು.

## ಅಡಿಕೆ

ಮುಂಬರುವ ತಿಂಗಳುಗಳಲ್ಲಿ ವಾತಾವರಣದಲ್ಲಿ ಉಷ್ಣತೆಯು ಹೆಚ್ಚುವ ಕಾರಣ, ಅಡಿಕೆ ತೋಟಗಳಲ್ಲಿ ಉಳುಮೆ ಮಾಡುವುದನ್ನು ನಿಲ್ಲಿಸಬೇಕು. ಪ್ರಸ್ತುತ ಕಾಲಾಮಾನದಲ್ಲಿ ನೀರಿನ ಅವಶ್ಯಕತೆ ಹೆಚ್ಚಾಗಿರುವುದರಿಂದ ತೋಟಗಳಲ್ಲಿ ಕೃಷಿ ತ್ಯಾಜ್ಯ ವಸ್ತುಗಳು ಅಥವಾ ಕಬ್ಬಿನ ರವದಿಯನ್ನು ಹರಡುವುದರಿಂದ ಕಳೆ ನಿಯಂತ್ರಣ ಹಾಗೂ ನೀರಿನ ತೇವಾಂಶವನ್ನು ಕಾಪಾಡಿಕೊಳ್ಳಲು ಅನುಕೂಲವಾಗುತ್ತದೆ. ಅನುಕೂಲವಿದ್ದಲ್ಲಿ ತಿಂಗಳಿಗೊಮ್ಮೆ ತುಂತುರು ನೀರಾವರಿಯನ್ನು ಕೊಡುವುದು ಉತ್ತಮ.

**ಇಂಗಾರು ಒಣಗುವ ಮತ್ತು ಎಳೆಕಾಯಿ ಉದುರುವ ರೋಗ**:

ಬೇಸಿಗೆ ತಿಂಗಳಲ್ಲಿ ರೋಗದ ಬಾಧೆ ಹೆಚ್ಚಾಗಿರುತ್ತದೆ. ಹೂ ಗೊಂಚಲ ತುದಿಯಿಂದ ಬುಡದ ಕಡೆಗೆ ಹಳದಿಯಾಗಿ ಕಂದು ಬಣ್ಣಕ್ಕೆ ತಿರುಗಿ ಎಳೆಕಾಯಿಗಳು ಹೆಚ್ಚಾಗಿ ಉದುರುತ್ತವೆ. ಹವಾಮಾನ ವೈಪರೀತ್ಯ, ಶಿಲೀಂಧ್ರ, ಪೋಷಕಾಂಶ ಮತ್ತು ನೀರಿನ ಕೊರತೆ, ಹೆಚ್ಚಿನ ಉಷ್ಣಾಂಶ, ಸರಿಯಾಗಿ ಪರಾಗಸ್ಪರ್ಶ ಆಗದಿರುವುದು ಮತ್ತು ಮರದ ಶಾರೀರಿಕ ಗುಣ ಕಾಯಿ ಉದುರುವುದಕ್ಕೆ ಮುಖ್ಯ ಕಾರಣಗಳು.

**ಇಂಗಾರು ತಿನ್ನುವ ಹುಳು**: ಮರಿ ಕೀಟಗಳು ಇಂಗಾರದ ಒಳ ಹೋಗಿ ತಿನ್ನುತ್ತವೆ. ಇಂಗಾರು ಅರಳದೇ ಕೊಳೆಯುತ್ತವೆ. ಹೂ ಗೊಂಚಲಿನ ಹೆಣ್ಣು ಮತ್ತು ಗಂಡು ಹೂಗಳನ್ನು ತಿನ್ನುತ್ತವೆ. ಬಾಧೆಯಾದ ಇಂಗಾರದಲ್ಲಿ ಕೀಟದ ಹಿಕ್ಕೆ ಕಾಣುತ್ತದೆ.

**ಹತೋಟಿ**: ಹಾನಿಗೊಳಗಾದ ಇಂಗಾರುಗಳನ್ನು ಮರದಿಂದ ಬೇರ್ಪಡಿಸಿ ನಾಶಪಡಿಸಬೇಕು. ಬಲಿತ ಇಂಗಾರುಗಳನ್ನು ಕೊಕ್ಕೆಯಿಂದ ಸೀಳಿ ಕ್ಲೋರೋಪೈರಿಫಾಸ್ (2 ಮಿ.ಲೀ./ಲೀ.) ಮತ್ತು ಡೈಥೇನ್ ಎಂ–45 (2.5 ಗ್ರಾಂ./ಲೀ.) ಬೆರಸಿ ಸಿಂಪಡಿಸಬೇಕು.

**ನುಶಿ**: ಎಲೆಗಳಿಂದ ರಸ ಹೀರುತ್ತವೆ. ಕೆಂಪು ನುಶಿಯಾದಲ್ಲಿ ಎಲೆಗಳ ಮೇಲೆ ಕೆಂಪು ಚುಕ್ಕೆಗಳು ಕಂಡು ನಂತರ ಕೈಯಿಂದ ಎಳೆದಾಗ ಕೆಂಪು ದ್ರವ ಅಂಟಿಕೊಳ್ಳುತ್ತದೆ. ಬಿಳಿ ನುಶಿಯಾದಲ್ಲಿ ಎಲೆಗಳು ಹಳದಿ ನಂತರ ಕಂದು ಬಣ್ಣಕ್ಕೆ ತಿರುಗಿ ನೀರಿನಂತ ದ್ರವ ಬೆರಳಿಗೆ ಅಂಟಿಕೊಳ್ಳುತ್ತದೆ.

**ಹತೋಟಿ**: ಗಿಡಗಳಿಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಒದಗಿಸಬೇಕು. ಡೈಕೊಫಾಲ್ 2.5 ಮಿ.ಲೀ./ಲೀ. ಅಥವಾ ಪ್ರೊಪಾರ್ ಗೈಟ್ 3 ಮಿ.ಲೀ./ಲೀ. ನೀರಿನಲ್ಲಿ ಬೆರಸಿ ಸಿಂಪಡಿಸಬೇಕು.

## ಜಾನುವಾರುಗಳು

ಜಾನುವಾರುಗಳಲ್ಲಿ ಹುಣ್ಣೆಗಳಿಗೆ ಟಿಕ್ ಟಾಕ್ ಔಷಧಿಯನ್ನು 2 ಮಿ.ಲೀ. ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿ ರಾಸುಗಳಿಗೆ ದೇಹದ ಎಲ್ಲಾ ಭಾಗಗಳಿಗೆ ಹಚ್ಚಿ ನಂತರ 45 ನಿಮಿಷ ಬಿಟ್ಟು ಸ್ನಾನ ಮಾಡಿಸುವುದರಿಂದ ನಿಯಂತ್ರಿಸಬಹುದಾಗಿದೆ.

ಹೈನುರಾಸುಗಳ ಆಹಾರದಲ್ಲಿ 2 ಕಿಲೋ ಗ್ರಾಂನಷ್ಟು ಅಝೋಲ್ಲಾ ಬಳಸುವುದರಿಂದ ಹಾಲಿನ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದರಿಂದ ಜೊತೆಗೆ ರಾಸುವಿನ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದಾಗಿದೆ.

ಹೈನುಗಾರಿಕೆ ಪ್ರಾರಂಭಿಸುವಂತಹ ರೈತರುಗಳು ಅಧಿಕ ಇಳುವರಿ ಮತ್ತು ಪೌಷ್ಠಿಕ ಆಹಾರ ಒದಗಿಸುವ ಮೇವಿನ ತಳಿಯಾದ ಸಂಪೂರ್ಣ (ಡಿ.ಎಚ್.ಎನ್.–6) ತಳಿಯನ್ನು ಬೆಳೆದುಕೊಳ್ಳುವುದು ಸೂಕ್ತ.

## ಮೀನುಗಾರಿಕೆಗೆ ಸಲಹೆಗಳು:

- ಮೀನು ಕೃಷಿ ಕೈಗೊಳ್ಳಲು ಕೊಳ– ಹೊಂಡ ನಿರ್ಮಾಣಕ್ಕೆ ಸಕಾಲ.
- ಮೀನು ಕೃಷಿ ಚಾಲ್ತಿಯಲ್ಲಿರುವ ಹೊಂಡಗಳಲ್ಲಿ, ಆಮ್ಲಜನಕದ ಕೊರತೆಯಾಗದಂತೆ ನೋಡಿಕೊಳ್ಳಲು, 5–10% ಹೊಸ ನೀರನ್ನು ಸೇರಿಸಬೇಕು. ಆಹಾರ ಮತ್ತು ಗೊಬ್ಬರದ ಪ್ರಮಾಣ ಹೆಚ್ಚಿಸಬಾರದು. ಮೀನುಗಳಿಗೆ ಚೀಲಗಳಲ್ಲಿ ಆಹಾರ ನೀಡಬೇಕು.
- ಆಹಾರದ ಖರ್ಚನ್ನು ಕಡಿಮೆಗೊಳಿಸಲು ಎಕರೆಗೆ 4000 ಕೆ.ಜಿ. ಯಂತೆ ಕಬ್ಬಿನ ರಸ ತೆಗೆದ ಸಿಪ್ಪೆಯನ್ನು ಗಂಟು ಇಲ್ಲವೆ ಎಳೆ ಎಳೆಯಾಗಿ ನೀರಿನಲ್ಲಿ ಮುಳುಗುವಂತೆ ಕಟ್ಟಿ ಬಿಡಬೇಕು. ಈ ಮೂಲಕ ಸೂಕ್ಷ್ಮ ಜೀವಾಣುಗಳ ಹಂದರವೇ ನಿರ್ಮಾಣವಾಗಿ, ಮೀನುಗಳಿಗೆ ಸುಲಭವಾಗಿ ಪೌಷ್ಠಿಕ ಆಹಾರ ದೊರಕುತ್ತದೆ.

### ಕೃಷಿ ಪದ

ಬಾರದಿರಲಿ ಎಂದಿಗು ಬರ
ಆಗದಿರಲಿ ಬದುಕು ಭಾರ
ಬರ ಅಂದ್ರೆ ಎಲ್ಲರಿಗೂ ಇಷ್ಟ
ಭಾರತದಲ್ಲಿ
ಅನ್ನೋದು ಸುಳ್ಳಾಗ್ಲಿ ನಮ್ಮೆಲ್ರ ಪ್ರಯತ್ನದಲ್ಲಿ
ಹೊಸ ವರುಷ ತರಲಿ ನೆಮ್ಮದಿ – ಶಾಂತಿ
ಹೊರಗುಳಿಯಲಿ ಪ್ರಳಯವೆನುವ ಭ್ರಾಂತಿ

ಕೃಷಿ ನಂಬಿದ ಮಂದಿ ನಾವು
ಸಮೃದ್ಧಿ ತಂದು ನೀಗಲಿ ನೋವು
ನೀರು–ಗಾಳಿ, ಬೆಳಕು ಬೇಕು ಇಳೆಯ ಕೃಷಿಗೆ
ಸೃಜನ ಶೀಲ ಸಂಸ್ಕಾರ ಬೇಕು ಬಾಳಿನ ಖುಷಿಗೆ
ಆಶಿಸೋಣ ಸದಾ,
ಬಾರದಿರಲಿ ಎಂದಿಗು ಬರ
ಆಗದಿರಲಿ ಬದುಕು ಭಾರ

–ದೇವರಾಜ ಟಿ.ಎನ್.

ರೈತರು ಕೂತರು ಮನೆಯಲ್ಲಿ
ಟಿ.ವಿ. ನೋಡುತ ರಿಮೋಟ್ ಕೈಯಲ್ಲಿ
ಬೆಳೆಗಳು ಹೋದವು ಹೊಲದಲ್ಲಿ
ಖಾಲಿಯಾದವು ಕಾಳು ಚೀಲದಲ್ಲಿ

–ದೇವಿಕಾ ಪ್ರಕಾಶ್
ರೈತ ಮಹಿಳೆ
ಕಾಮಗೊಂಡನಹಳ್ಳಿ

ಪ್ರಧಾನ ಸಂಪಾದಕರು:
ಡಾ. ದೇವರಾಜ ಟಿ.ಎನ್.

ಸಂಪಾದಕರು:
ಶ್ರೀ ರಘುರಾಜ ಜೆ., ಶ್ರೀ ಬಸವನಗೌಡ ಎಂ.ಜಿ.,
ಶ್ರೀ ಮಲ್ಲಿಕಾರ್ಜುನ ಬಿ.ಓ., ಡಾ. ಜಯದೇವಪ್ಪ ಜಿ.ಕೆ., ಶ್ರೀ ಪ್ರಸನ್ನಕುಮಾರ ಎನ್.,

ಪ್ರಕಾಶಕರು: ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್, ಬಿಐಇಟಿ ರಸ್ತೆ, ದಾವಣಗೆರೆ–577004, ಕರ್ನಾಟಕ